# ಹತ್ತನೆಯ ತರಗತಿ ಅರ್ಧವಾರ್ಷಿಕ ಮಾದರಿ ಪ್ರಶ್ನೆಪತ್ರಿಕೆ

ವಿಷಯ : ದ್ವಿತೀಯ ಭಾಷೆ – ಕನ್ನಡ
ಸಮಯ : 3 ಗಂಟೆ

ವಿಷಯ ಸಂಕೇತ : 33 K
ಅಂಕಗಳು = 80

---

**VII ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.** 4X1=4

1. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ.......
   ಎ) 2 ಬಿ) 5 ಸಿ) 3 ಡಿ) 4

2. 'ಒಂದೊಂದು' ಇದು ................ ವ್ಯಾಕರಣಾಂಶಕ್ಕೆ ಉದಾಹರಣೆ.
   ಎ) ಅನುಕರಣಾವ್ಯಯ ಬಿ) ಜೋಡುನುಡಿ ಸಿ) ನುಡಿಗಟ್ಟು ಡಿ) ದ್ವಿರುಕ್ತಿ

3. 'ಹಿಂಡುಗಟ್ಟಿ' ಇದು................ಸಮಾಸಕ್ಕೆ ಉದಾಹರಣೆ.
   ಎ) ತತ್ಪುರುಷ ಬಿ) ಕ್ರಿಯಾ ಸಿ) ಕರ್ಮಧಾರಯ ಡಿ) ದ್ವಿಗು

4. 'ಪ್ರಗತಿಯಲ್ಲಿ' ಇಲ್ಲಿರುವ ವಿಭಕ್ತಿ ಪ್ರತ್ಯಯ................
   ಎ) ದ್ವಿತೀಯ ಬಿ) ಸಪ್ತಮಿ ಸಿ) ತೃತೀಯ ಡಿ) ಷಷ್ಠಿ

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** 12X1 =12

5. ಇಂದ್ರನು ಯಾರಿಗೆ ವರವನ್ನು ಕೊಡಬೇಕೆಂದು ತೀರ್ಮಾನಿಸಿದನು?
6. ವಿಷದ ಬಾಣವು ಮರಕ್ಕೆ ಏಕೆ ತಗುಲಿತು?
7. ಅಸಿ-ಮಸಿಗಿಂತ ಮಹತ್ವವಾದುದು ಯಾವುದು?
8. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?
9. ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಯಾವ ಪಾಠ ಹೇಳುತ್ತವೆ?
10. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ?
11. ಬಟ್ಟಲಾಕಾರದಲ್ಲಿ ಗೂಡು ಕಟ್ಟುವ ಹಕ್ಕಿಗಳು ಯಾವುವು?
12. ಕವಯಿತ್ರಿ ಸುಕನ್ಯಾ ಮಾರುತಿ ತ್ರಿಶಂಕುಗಳು ಎಂದು ಯಾರನ್ನು ಕರೆದಿದ್ದಾರೆ?
13. ಕಾಡನ್ನು ಅಲೆದ ಸಿದ್ಧಾರ್ಥನಿಗೆ ಹೊಳೆದುದ್ದೇನು?
14. ಬುದ್ಧನು ಅರಿತುಕೊಂಡ ಬದುಕಿನ ಸತ್ಯವೇನು?
15. ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಹೇಳಿದ್ದಾರೆ?
16. ತಿಮಿರಕ್ಕೆ ವೈರಿ ಯಾವುದು?

**III ಈ ಕೆಳಗಿನ ಪ್ರಶ್ನೆಗಳಿಗೆ 3 ಅಥವಾ 4 ವಾಕ್ಯಗಳಲ್ಲಿ ಉತ್ತರಿಸಿ.** 8X2=16

17. ಸಾಮಾನ್ಯವಾದ ಲೋಕವರ್ತನೆ ಯಾವುದು?
18. ಪೆನ್ನು ಖಡ್ಗಕ್ಕಿಂತ ಹರಿತವಾದುದು ಏಕೆ?
19. ಹಕ್ಕಿಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ ?
20. ಏಣಿ ಹೇಳಿಕೊಳ್ಳುವ ಕಷ್ಟಗಳೇನು?
21. ಚೈತ್ರದಲ್ಲಿ ಹಕ್ಕಿಗಳ ಕಲರವ ಹೇಗಿರುತ್ತದೆಂದು ಕವಿ ವರ್ಣಿಸಿದ್ದಾರೆ?
22. ಮಾನವನ ಬದುಕು ಕರ್ಪೂರದಂತೆ ಇರಬೇಕು ಏಕೆ?
23. ಕಳ್ಳರ ಗುರುವಿನ ಮನಃಪರಿವರ್ತನೆ ಹೇಗಾಯಿತು?
24. ಹಾವನ್ನು ಕಂಡ ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿ ಬಂದವು?

**IV ಈ ಕೆಳಗಿನ ಸಾಹಿತಿಗಳ ಜನನ, ಸ್ಥಳ, ಕಾಲ, ಕೃತಿಗಳು, ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** 1X3=3

25 ಬಸವರಾಜ ಸಾದರ

**V ಈ ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** 1X3=3

26. ಕಾಲೂರುವ ನೆಲವನ್ನೇ
ತಿರಸ್ಕರಿಸಿದ ಇವರು
ಆಕಾಶದಲ್ಲಿ ಎಷ್ಟು ಹೊತ್ತು
ಹಾರಾಡುತ್ತಾರೆ?
ಮತ್ತೆ ನನ್ನ ಆಸರೆ ಬೇಕೇಬೇಕು



Use E-Papers, Save Tress
Above line hide when print out
Scanned by CamScanner

**VI ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಸಮನ್ವಯಗೊಳಿಸಿ ಬರೆಯಿರಿ** 1X3=3

27. ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲ್ ಕೆರೆ.

**VII ಈ ಕೆಳಗಿನ ಗಾದೆ ಮಾತುಗಳಲ್ಲಿ ಯಾವುದಾರೂ ಒಂದನ್ನು ವಿಸ್ತರಿಸಿ ಬರೆಯಿರಿ** 1X3=3

28 ಹಾಸಿಗೆ ಇದ್ದಷ್ಟು ಕಾಲು ಚಾಚು.

ಅಥವಾ

ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ.

**VIII ಈ ಕೆಳಗಿನ ವಾಕ್ಯಗಳಿಗೆ ಸಂದರ್ಭವನ್ನು ಸ್ವಾರಸ್ಯದೊಂದಿಗೆ ವಿವರಿಸಿ.** 5X3=15

29. "ಅದರ ಈಗಿನ ಅವಸ್ಥೆಯನ್ನು ನಾನು ನೋಡಲಾರೆ"
30. "ಅವರು ಯಾರಿಗೂ ಮೋಸ, ವಂಚನೆ ಮಾಡುವವರಲ್ಲ."
31. "ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು."
32. "ನೆಲದಮ್ಮ ನವವಧುವೆ ಆದಳಿಂತು!"
33. "ಸಿಡುಕು ಮಿಡುಕನು ತೊರೆದು ಮೌನಿಯಾಗು"

**IX ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** 1X4=4

34. ಏಕಾಂಗಿ ವೀರನಂತೆ............................ **ಅಥವಾ** ಕಾಡು ಕಾಡು ........................................

........................................................ ........................................................

........................................................ ........................................................

........................................ಕತ್ತಲಲ್ಲಿ ನಡೆದನು. ....................ಮಹಾಬೆಳಕೊಂದು ಕಂಡಿತು.

**X ಈ ಕೆಳಗಿನ ಪ್ರಶ್ನೆಗಳಿಗೆ 8 ಅಥವಾ 10 ವಾಕ್ಯಗಳಲ್ಲಿ ಉತ್ತರಿಸಿ.** 1X4=4

35. ಬಾಲಕ ಪುಟ್ಟಯ್ಯ ಹಾರ್ಮೋನಿಯಂ ನುಡಿಸಿದ ಪ್ರಸಂಗ ವಿವರಿಸಿ. **ಅಥವಾ**

ಪುಟ್ಟಯ್ಯ ಸಮಾಜಕ್ಕೆ ಮುಡುಪಾದ ಪ್ರಸಂಗವನ್ನು ಕುರಿತು ಬರೆಯಿರಿ.

**XI ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** 2x2=4

36. ಮನಸ್ಸು ರೋಗವನ್ನು ಸೃಷ್ಟಿಸಬಲ್ಲದು, ಗುಣಪಡಿಸಲೂ ಬಲ್ಲದು! ತಾಳ್ಮೆ, ಪ್ರೀತಿ, ಕರುಣೆ, ದಾನಬುದ್ಧಿ, ನಿಸ್ವಾರ್ಥ ಸೇವಾ ಮನೋಭಾವ – ಇವೇ ಮೊದಲಾದ ರಚನಾತ್ಮಕ ಭಾವನೆಗಳು ದೇಹ–ಯಂತ್ರದ ಆರೋಗ್ಯಕರ ಚಟುವಟಿಕೆಗಳಿಗೆ ಕಾರಣವಾಗುತ್ತವೆ. ನಮ್ಮಲ್ಲಿ ಸಂತೋಷ, ತೃಪ್ತಿ ಹಾಗೂ ಸೃಜನಶೀಲ ಪ್ರವೃತ್ತಿಗಳನ್ನು ಎಚ್ಚರಗೊಳಿಸುತ್ತವೆ. ಹಾಗೆಯೇ ನಿಷೇಧಮಯ ಭಾವನೆಗಳಿಂದ ಭಯ, ಚಿಂತೆ, ದ್ವೇಷ, ಅಸೂಯೆ, ಸೋಲಿನ ಮನೋಭಾವ ಹಾಗೂ ಸಂಕುಚಿತ ಸ್ವಾರ್ಥದ ನಾನಾ ಅವತಾರಗಳು ಸಮಸ್ತ ದೇಹ ಮತ್ತು ಅಂಗಾಂಗಗಳಿಗೆ ಕೆಡುಕನ್ನುಂಟು ಮಾಡಿ ರೋಗಕ್ಕೆ ಕಾರಣವಾಗುತ್ತವೆ. ಪ್ರಸನ್ನತೆ, ಶಾಂತತೆ, ಧೈರ್ಯ, ಆತ್ಮವಿಶ್ವಾಸ, ದೃಢನಿಶ್ಚಯ ಇವೇ ಮೊದಲಾದ ಭಾವನೆಗಳು ಶರೀರದ ಸುಸ್ಥಿತಿಗೆ ಆರೋಗ್ಯ ವರ್ಧಕ ಟಾನಿಕ್‌ಗಿಂತಲೂ ಹೆಚ್ಚಿನ ಸಹಾಯ ಮಾಡುತ್ತವೆ. ಮನಸ್ಸಿನಲ್ಲಿ ಉದಿಸುವ ಯೋಚನೆ ಎಂಬ ದ್ರವ್ಯದಿಂದ ವಿಷವನ್ನು ತಯಾರಿಸಬಹುದು, ಅಮೃತವನ್ನೂ ತಯಾರಿಸಬಹುದು. ಮನಸ್ಸು ಕೆಲಸ ಮಾಡುವ ಸೂಕ್ಷ್ಮ ನಿಯಮವನ್ನು ತಿಳಿದುಕೊಂಡರೆ ಶ್ರದ್ಧೆಯಿಂದ ಶ್ರಮಿಸಿದರೆ ವಿಷವನ್ನೂ ಅಮೃತವನ್ನಾಗಿಸಬಹುದು. ಜಾಡ್ಯಮನೋಭಾವ, ಅನೈಕಾಗ್ರತೆ, ಅವ್ಯವಸ್ಥೆ, ಸಿಡುಕು, ಬಲವಾದ ಪೂರ್ವಾಗ್ರಹಗಳು ಮನಸ್ಸೆಂಬ ಯಂತ್ರವನ್ನು ಹಾಳುಮಾಡಿಬಿಡುತ್ತವೆ. ಕ್ರಮನಿಯಮ, ವ್ಯವಸ್ಥೆ, ತಾಳ್ಮೆ, ಸಮತೋಲನ, ಸದುದ್ದೇಶ, ವ್ಯಾವಹಾರಿಕತೆ ಇವುಗಳ ಸಹಕಾರದಿಂದ ಯೋಜನೆಗಳನ್ನು ರೂಪಿಸಿಕೊಂಡರೆ ನಮ್ಮನ್ನು ದುರ್ಬಲಗೊಳಿಸುವ, ದುರಂತಕ್ಕೀಳಿಸುವ ನಿಷೇಧಾತ್ಮಕ ಭಾವನೆಗಳು ಸಮೀಪ ಸುಳಿಯಲಾರವು.

**ಪ್ರಶ್ನೆಗಳು:**

ಅ. ರೋಗಕ್ಕೆ ಕಾರಣವಾಗುವ ಅಂಶಗಳಾವುವು?

ಆ. ಯಾವುವು ಮನಸ್ಸೆಂಬ ಯಂತ್ರವನ್ನು ಹಾಳುಮಾಡುತ್ತವೆ?

**XII ಈ ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಪ್ರಬಂಧವನ್ನು ಬರೆಯಿರಿ.** 1X4=4

37. ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ, **ಅಥವಾ** ಸ್ವಚ್ಛ ಭಾರತ ಅಭಿಯಾನ.

**XIII ಈ ಕೆಳಗಿನ ಯಾವುದಾದರೂ ಒಂದು ಪತ್ರವನ್ನು ಬರೆಯಿರಿ.** 1X5=5

38. ನಿಮ್ಮನ್ನು ಸುರೇಶ ಅಥವಾ ಸುರೇಖ ಸರ್ಕಾರಿ ಪ್ರೌಢಶಾಲೆ ಮೈಸೂರು ಎಂದು ಭಾವಿಸಿ ಬೆಂಗಳೂರಿನಲ್ಲಿರುವ ನಿಮ್ಮ ತಂದೆ ಚಂದ್ರಪ್ಪನವರಿಗೆ ಪ್ರವಾಸಕ್ಕೆ 1,000 ರೂ.ಗಳನ್ನು ಕಳುಹಿಸುವಂತೆ ಕೋರಿ ಪತ್ರ ಬರೆಯಿರಿ.

**ಅಥವಾ**

ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವಂತೆ ಕೋರಿ ಮಹಾನಗರ ಪಾಲಿಕೆ ಅಧ್ಯಕ್ಷರಿಗೆ ಒಂದು ಪತ್ರ ಬರೆಯಿರಿ.

\-----



Use E-Papers, Save Tress
Above line hide when print out
Scanned by CamScanner